**All India Radio: Bangalore**
**National Bulletin In Kannada**
**27.05.2026 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**27.05.2026 7.35 am**

**<>><><*><><<>**

ಮುಖ್ಯಾಂಶಗಳು

**೧. ಸಿಕ್ಕಿಂ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ನಾಥುಲಾಪಾಸ್‌ಗೆ ಭೇಟಿ**

**೨. ಡ್ರೋಣ್ ಮೂಲಕ ಮಾದಕವಸ್ತು, ಶಸ್ತ್ರಾಸ್ತ್ರಗಳ ಕಳ್ಳಸಾಗಣೆ ತಡೆಗೆ ನಿಗ್ರಹ ವ್ಯವಸ್ಥೆ- ಗೃಹ ಸಚಿವ ಅಮಿತ್ ಶಾ**

**೩. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಸಂಬಂಧ ಇಂದು ತೀರ್ಪು ಪ್ರಕಟಿಸಲಿರುವ ಸುಪ್ರೀಂಕೋರ್ಟ್**

**೪. ದೇಶದ ಮೊದಲ ಹೈಡ್ರೋಜನ್ ಚಾಲಿತ ರೈಲು ಸಂಚಾರಕ್ಕೆ ಅನುಮೋದನೆ**

**೫. ಐಪಿಎಲ್ ಟಿ-೨೦ ಕ್ರಿಕೆಟ್; ಸತತ ಎರಡನೇ ಬಾರಿ ಫೈನಲ್ ಪ್ರವೇಶಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು**

**<>><><*><><<>**

ಮೂರು ದಿನಗಳ ಸಿಕ್ಕಿಂ ಪ್ರವಾಸ ಕೈಗೊಂಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ನಾಥುಲಾಪಾಸ್‌ಗೆ ಭೇಟಿ ನೀಡಲಿದ್ದಾರೆ. ಆ ನಂತರ ಸಿಕ್ಕಿಂ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಗವಹಿಸಲಿದ್ದಾರೆ. ನಾಳೆ ರಾಷ್ಟ್ರಪತಿಯವರು ಸಿಕ್ಕಿಂ ಪೊಲೀಸ್‌ಗೆ ರಾಷ್ಟ್ರಪತಿಗಳ ಪದಕವನ್ನು ನೀಡಲಿದ್ದಾರೆ. ಈ ಪ್ರತಿಷ್ಠಿತ ಪದಕವನ್ನು ಸ್ವೀಕರಿಸುತ್ತಿರುವ ೧೫ನೇ ಪೊಲೀಸ್ ಪಡೆ ಸಿಕ್ಕಿಂ ಆಗಿದೆ. ಮೂರು ದಿನಗಳ ಭೇಟಿಗಾಗಿ ನಿನ್ನೆ ಸಿಕ್ಕಿಂಗೆ ಆಗಮಿಸಿದ ಅವರನ್ನು ಆರ್ಚಿಡರಿಯಮ್‌ನಲ್ಲಿ ರಾಜ್ಯಪಾಲ ಓಂ ಪ್ರಕಾಶ್ ಮಾಥೂರ್ ಮತ್ತು ಮುಖ್ಯಮಂತ್ರಿ ಪ್ರೇಮ್‌ಸಿಂಗ್ ತಮಾಂಗ್ ಮತ್ತಿತರರು ಸ್ವಾಗತಿಸಿದರು.

**<>><><*><><<>**

ಡ್ರೋಣ್ ಮೂಲಕ ಮಾದಕವಸ್ತುಗಳು ಹಾಗೂ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಣೆ ಮಾಡುವುದನ್ನು ತಡೆಯಲು ಮುಂದಿನ ಆರು ತಿಂಗಳಲ್ಲಿ ಡ್ರೋಣ್ ನಿಗ್ರಹ ವ್ಯವಸ್ಥೆಯನ್ನು ಅಳವಡಿಸುವ ಪ್ರಕ್ರಿಯೆಯನ್ನು ಸರ್ಕಾರ ಕೈಗೊಂಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಅವರು, ರಾಜಸ್ಥಾನದ ಬಿಕನೇರ್ ಜಿಲ್ಲೆಯ ಸಾಂಚು ಗಡಿ ಹೊರಠಾಣೆಯಲ್ಲಿ ಗಡಿ ಭದ್ರತಾಪಡೆಯ ಯೋಧರನ್ನು ಉದ್ದೇಶಿಸಿ ಮಾತನಾಡಿದರು. ಗಡಿಉದ್ದಕ್ಕೂ ತೀವ್ರ ಎಚ್ಚರಿಕೆ ವಹಿಸಲಾಗಿದೆ. ಹೊರಗಿನ ಶತೃಗಳ ಮೇಲೆ ಮಾತ್ರವಲ್ಲದೆ ದೇಶದೊಳಗಿನ ದುಷ್ಟಶಕ್ತಿಗಳ ಮೇಲೂ ತೀವ್ರ ನಿಗಾ ಇರಿಸಿ ಅವರನ್ನು ಮಟ್ಟಹಾಕಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು. ಭಾರತದ ಭೂಭಾಗದಲ್ಲಿನ ಡ್ರೋಣ್‌ಗಳ ನೆರವಿನಿಂದ ಗಡಿಯಾಚೆಯ ಚಲನವಲನ ಮೇಲೆ ನಿಗಾ ಇಡಲಾಗುತ್ತದೆ ಮತ್ತು ಅಪಾಯಕಾರಿ ಕೃತ್ಯಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲಾಗುತ್ತಿದೆ ಎಂದು ಅಮಿತ್ ಶಾ ಹೇಳಿದ್ದಾರೆ.

<>><><*><><<>

ಕೇಂದ್ರ ಚುನಾವಣಾ ಆಯೋಗ ಕೈಗೊಂಡಿರುವ ವಿಶೇಷ ಮತಪಟ್ಟಿ ಪರಿಷ್ಕರಣೆ-ಎಸ್‌ಐಆರ್ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಹಲವು ಅರ್ಜಿಗಳ ಕುರಿತು ಸುಪ್ರೀಂಕೋರ್ಟ್ ಇಂದು ತೀರ್ಪು ಪ್ರಕಟಿಸಲಿದೆ. ಸುದೀರ್ಘ ವಾದ-ಪ್ರತಿವಾದ ಆಲಿಸಿದ ನಂತರ ಈ ವರ್ಷದ ಆರಂಭದಲ್ಲಿ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಯಾದವ್ ಮತ್ತು ನ್ಯಾ.ಜೋಯ್ ಮಲ್ಯ ಬಾಗ್ಚಿ ಅವರಿದ್ದ ನ್ಯಾಯಪೀಠ ತನ್ನ ತೀರ್ಪು ಕಾಯ್ದಿರಿಸಿದ್ದು, ಇಂದು ಆ ತೀರ್ಪನ್ನು ಪ್ರಕಟಿಸಲಿದೆ. ಚುನಾವಣಾ ಆಯೋಗ ಸಂವಿಧಾನದ ೩೨೪ನೇ ಕಲಂ ಅಡಿ ಲಭ್ಯವಿರುವ ಅಧಿಕಾರವನ್ನು ಬಳಸಿ ಹಾಗೂ ಪ್ರಜಾಪ್ರತಿನಿಧಿ ಕಾಯ್ದೆ-೧೯೫೦ ಮತ್ತು ಅದರಡಿ ರೂಪಿಸಲಾಗಿರುವ ನಿಯಮಗಳ ಅನ್ವಯ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯ - ಎಸ್‌ಐಆರ್ ಅನ್ನು ಅರ್ಜಿದಾರರು ಪ್ರಶ್ನಿಸಿದ್ದರು. ೨೦೦೨ ರಿಂದೀಚೆಗೆ ಯಾವ ಹೆಸರು ಮತದಾರರ ಪಟ್ಟಿಯಲ್ಲಿದಿಯೋ ಅವುಗಳನ್ನು ಪರಿಶೀಲಿಸುವ ಕಾರ್ಯವನ್ನು ಚುನಾವಣಾ ಆಯೋಗ ಕೈಗೊಂಡಿದೆ.

<>><><*><><<>

ಭಾರತ-ಕೆನಡಾ ಆರ್ಥಿಕ ಪಾಲುದಾರಿಕೆಯ ಮುಂದಿನ ಅಧ್ಯಾಯವು ವಿಶ್ವಾಸದಿಂದ ಮುನ್ನಡೆಸಲ್ಪಡುತ್ತದೆ ಮತ್ತು ಇದು ಎರಡೂ ರಾಷ್ಟ್ರಗಳ ಹಂಚಿಕೆಯ ಸಮೃದ್ಧಿಗೆ ಕಾರಣವಾಗುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕೆನಡಾದ ಟೊರೊಂಟೊದಲ್ಲಿ ಕಳೆದ ರಾತ್ರಿ ನಡೆದ 'ರಾಜಕೀಯ ಪುನರ್

ರಚನೆಯಿಂದ ವಾಣಿಜ್ಯ ವಿತರಣೆಗೆ’ ಎಂಬ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಎರಡೂ ದೇಶಗಳು ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ ಒತ್ತಾಯಿಸುತ್ತಿರುವುದರಿಂದ ರಾಷ್ಟ್ರಗಳ ನಡುವಿನ ವಿಶ್ವಾಸವು ಹೊಸ ವ್ಯಾಪಾರ ಮತ್ತು ಹೂಡಿಕೆ ಅವಕಾಶಗಳನ್ನು ತೆರೆಯುತ್ತಿದೆ ಎಂದರು. ವ್ಯಾಪಾರ ಮತ್ತು ಹೂಡಿಕೆ ಸಂಬಂಧಗಳನ್ನು ವಿಸ್ತರಿಸುವಲ್ಲಿ ಸಿಇಪಿಎ ಹೇಗೆ ಪ್ರಮುಖ ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ವಲಯಗಳಾದ್ಯಂತ ಸಹಯೋಗಕ್ಕಾಗಿ ಹೊಸ ಮಾರ್ಗಗಳನ್ನು ತೆರೆಯುತ್ತದೆ ಎಂಬುದರ ಕುರಿತು ಮಾತನಾಡಿದ ಅವರು, ವೈವಿಧ್ಯತೆಯು ಭಾರತ ಮತ್ತು ಕೆನಡಾ ನಡುವಿನ ಸಂಬಂಧಗಳನ್ನು ವ್ಯಾಖ್ಯಾನಿಸುತ್ತದೆ ಎಂದು ಅವರು ಹೇಳಿದರು.

<>><><*><><<>

ಪರಿಶಿಷ್ಟ ಜಾತಿ ಕಲ್ಯಾಣ ಯೋಜನೆಗಳ ಅನುಷ್ಠಾನವನ್ನು ಡಿಜಿಟಲೀಕರಣಗೊಳಿಸಲು ಮತ್ತು ಬಲಪಡಿಸುವ ಉದ್ದೇಶದ ಪಿಎಂ-ಎಜೆಎವೈ ಪೋರ್ಟಲ್ ಮತ್ತು ಎಜೆಎವೈ ಮೊಬೈಲ್ ಅಪ್ಲಿಕೇಶನ್ ಅನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ನವದೆಹಲಿಯಲ್ಲಿ ನಿನ್ನೆ ಬಿಡುಗಡೆ ಮಾಡಿದರು. ಈ ಉಪಕ್ರಮವು ಪ್ರಧಾನ ಮಂತ್ರಿ ಅನುಸೂಚಿತ ಜಾತಿ ಅಭ್ಯುದಯ ಯೋಜನೆ (ಪಿಎಂ-ಎಜೆಎವೈ) ಯೋಜನೆಯ ಅನುಷ್ಠಾನದ ಗುಣಮಟ್ಟವನ್ನು ತ್ವರಿತಗೊಳಿಸುತ್ತದೆ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ತಿಳಿಸಿದೆ. ಕಾಗದ ಆಧಾರಿತದಿಂದ ಸಂಪೂರ್ಣ ಡಿಜಿಟಲ್ ಆಧಾರಿತ ಮತ್ತು ನೈಜ-ಸಮಯದ ಪ್ರಕ್ರಿಯೆಗೆ ಪರಿವರ್ತನೆಗೊಳ್ಳುವ ಗುರಿ ಹೊಂದಿದೆ. ಈ ವೇಳೆ ವೀರೇಂದ್ರಕುಮಾರ್, ಈ ಉಪಕ್ರಮವನ್ನು ಪರಿಶಿಷ್ಟರ ಕಲ್ಯಾಣ ಉಪಕ್ರಮಗಳಿಗೆ ಪಾರದರ್ಶಕ, ಡಿಜಿಟಲ್ ಮತ್ತು ಸಬಲೀಕೃತ ಸೇವಾ ವಿತರಣೆಯತ್ತ ಪ್ರಮುಖ ಹೆಜ್ಜೆ ಎಂದು ಬಣ್ಣಿಸಿದರು. ಪಿಎಂ-ಎಜೆಎವೈ ಮೊಬೈಲ್ ಅಪ್ಲಿಕೇಶನ್ ಅನ್ನು ಸಮೀಕ್ಷೆಗಳು ಮತ್ತು ಗ್ರಾಮ ಅಭಿವೃದ್ಧಿ ಯೋಜನೆಗಳ ತಯಾರಿಕೆಯಂತಹ ಕಾಗದ ಆಧಾರಿತ ಕೆಲಸದಿಂದ ತಳಮಟ್ಟದಲ್ಲಿ ಡಿಜಿಟಲ್ ವೇದಿಕೆಗೆ ಪರಿವರ್ತನೆಗೊಳ್ಳಲು ಏಕೀಕೃತ ಡಿಜಿಟಲ್ ವ್ಯವಸ್ಥೆಯ ಪರಿಕಲ್ಪನೆ ರೂಪಿಸಿ ಅಭಿವೃದ್ಧಿಪಡಿಸಲಾಗಿದೆ.

<>><><*><><<>

ದೇಶದ ಮೊದಲ ಹೈಡ್ರೋಜನ್ ಚಾಲಿತ ೧೦-ಬೋಗಿಗಳ ಡೆಮು ರೈಲು ಸಂಚಾರವನ್ನು ಆರಂಭಿಸಲು ರೈಲ್ವೆ ಸಚಿವಾಲಯ ಅನುಮೋದನೆ ನೀಡಿದೆ. ಈ ಕ್ರಮವು ರೈಲ್ವೆ ವಲಯದಲ್ಲಿ ಹಸಿರು ಮತ್ತು ಸುಸ್ಥಿರ ಸಾರಿಗೆಯನ್ನು ಉತ್ತೇಜಿಸುವತ್ತ ಮಹತ್ವದ ಹೆಜ್ಜೆಯಾಗಿದೆ. ಈ ರೈಲು ಜಿಂದ್ ಮತ್ತು ಸೋನಿಪತ್ ನಡುವೆ ಗರಿಷ್ಠ ೭೫ ಕಿ.ಮೀ ವೇಗದಲ್ಲಿ ಚಲಿಸಲಿದ್ದು, ವಿದ್ಯುತ್ ಉತ್ಪಾದಿಸಲು

ಹೈಡ್ರೋಜನ್ ಇಂಧನ ಕೋಶಗಳನ್ನು ಬಳಸಲಾಗುವುದು. ಈ ರೈಲು ಒಟ್ಟು ೧,೨೦೦ ಕಿಲೋವ್ಯಾಟ್ ವಿದ್ಯುತ್ ಸಾಮರ್ಥ್ಯವನ್ನು ಹೊಂದಿರುತ್ತದೆ. ಇದು ಡಿಸ್ಟ್ರಿಬ್ಯೂಟೆಡ್ ಪವರ್ ರೋಲಿಂಗ್ ಸ್ಟಾಕ್ ತಂತ್ರಜ್ಞಾನವನ್ನು ಬಳಸುತ್ತದೆ, ಅಂದರೆ ವಿದ್ಯುತ್ ವ್ಯವಸ್ಥೆಯನ್ನು ಕೇವಲ ಒಂದು ಲೋಕೋಮೋಟಿವ್‌ನಲ್ಲಿ ಇರಿಸುವ ಬದಲು ರೈಲು ಕೋಚ್‌ಗಳಾದ್ಯಂತ ಹರಡಲಾಗಿರುತ್ತದೆ.

<>><><*><><<>

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ನವದೆಹಲಿಯಲ್ಲಿ ನಿನ್ನೆ ಸಂಜೆ ತಮ್ಮ ಆಸ್ಟ್ರೇಲಿಯಾದ ಸಹವರ್ತಿ ಪೆನ್ನಿ ವಾಂಗ್ ಅವರೊಂದಿಗೆ ೧೭ ನೇ ವಿದೇಶಾಂಗ ಸಚಿವರ ಚೌಕಟ್ಟು ಸಂವಾದದ ಸಹ-ಅಧ್ಯಕ್ಷತೆ ವಹಿಸಿದ್ದರು. ಇಂಡೋ-ಪೆಸಿಫಿಕ್, ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಇತರ ಪ್ರಾದೇಶಿಕ, ಜಾಗತಿಕ ಮತ್ತು ಬಹುಪಕ್ಷೀಯ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು ಎಂದು ಡಾ.ಜೈಶಂಕರ್ ಹೇಳಿದರು. ಎರಡೂ ರಾಷ್ಟ್ರಗಳ ನಡುವಿನ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯ ಸ್ಥಿರ ಪ್ರಗತಿಯನ್ನು ಸಹ ಉಭಯ ನಾಯಕರು ಪರಾಮರ್ಶಿಸಿದರು. ಪರಮಾಣು ಶಕ್ತಿಯನ್ನು ಉತ್ಪಾದಿಸಲು ಯುರೇನಿಯಂ ಸರಬರಾಜು ಸೇರಿದಂತೆ ಇಂಧನ ವಲಯದಲ್ಲಿ ಸಹಕಾರ ವಿಸ್ತರಿಸುತ್ತಿದೆ. ಎರಡು ದೇಶಗಳು ನಿರ್ಣಾಯಕ ಖನಿಜಗಳಲ್ಲಿಯೂ ಸಹಭಾಗಿತ್ವದಲ್ಲಿ ತೊಡಗಿಸಿಕೊಂಡಿವೆ ಎಂದು ಡಾ. ಜೈಶಂಕರ್ ಹೇಳಿದರು.

<>><><*><><<>

ದ್ವಿಪಕ್ಷೀಯ ರಕ್ಷಣಾ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಭಾರತ ಮತ್ತು ರೊಮೇನಿಯಾ ನವದೆಹಲಿಯಲ್ಲಿ ನಿನ್ನೆ ರಕ್ಷಣಾ ಸಹಕಾರದ ಜಂಟಿ ಸಮಿತಿಯ ಎರಡನೇ ಸಭೆಯನ್ನು ನಡೆಸಿದವು. ಸಭೆಯು ಹಾಲಿ ಇರುವ ರಕ್ಷಣಾ ಸಹಕಾರ ಸಂಬಂಧಗಳನ್ನು ಪರಾಮರ್ಶೆ ನಡೆಸಿತು ಮತ್ತು ಪ್ರಮುಖ ಕ್ಷೇತ್ರಗಳಲ್ಲಿ ಸಹಯೋಗವನ್ನು ವಿಸ್ತರಿಸುವ ಮಾರ್ಗಗಳ ಕುರಿತು ಚರ್ಚಿಸಿತು. ಸೈಬರ್ ರಕ್ಷಣೆ, ಮಿಲಿಟರಿ ವೈದ್ಯಕೀಯ ಸಹಕಾರ, ಜಂಟಿ ತರಬೇತಿ, ಸಾಮರ್ಥ್ಯ ವೃದ್ಧಿ ಮತ್ತು ರಕ್ಷಣಾ ಕೈಗಾರಿಕಾ ಸಹಯೋಗವನ್ನು ಒಳಗೊಂಡ ದ್ವಿಪಕ್ಷೀಯ ರಕ್ಷಣಾ ಸಹಕಾರ ಯೋಜನೆಯನ್ನು ಎರಡೂ ದೇಶಗಳು ಅಂತಿಮಗೊಳಿಸಿದವು. ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿ ಮತ್ತು ರೊಮೇನಿಯಾದ ರಕ್ಷಣಾ ನೀತಿ, ಯೋಜನೆ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ಕಂಪನಿಯ ಉಪ ಮುಖ್ಯಸ್ಥರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

<>><><*><><<>

ಚಂದ್ರನ ತನ್ನ ಮೇಲೆ ನೆಲೆಯನ್ನು ನಿರ್ಮಿಸುವ ಅಮೆರಿಕದ ಯೋಜನೆಯ ಭಾಗವಾಗಿ ಚಂದ್ರನಿಗೆ ಕಳುಹಿಸಲು ಉದ್ದೇಶಿಸಿರುವ ರೋಬೋಟಿಕ್ ಲ್ಯಾಂಡರ್‌ಗಳು, ಹಾಪಿಂಗ್ ಡ್ರೋನ್‌ಗಳು ಮತ್ತು ವಾಹಕಗಳ ವಿವರಗಳನ್ನು ಅಮೆರಿಕದ ರಾಷ್ಟ್ರೀಯ ಏರೋನಾಟಿಕ್ಸ್ ಮತ್ತು ಬಾಹ್ಯಾಕಾಶ ಸಂಸ್ಥೆ- ನಾಸಾ ಬಿಡುಗಡೆ ಮಾಡಿದೆ. ೨೦೨೮ರಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕಾರದಿಂದ ಕೆಳಗಿಳಿಯುವ ಮುನ್ನ ಅಮೆರಿಕನ್ನರನ್ನು ಮತ್ತೆ ಚಂದ್ರನ ಮೇಲೆ ಇಳಿಸಲು ಅಮೆರಿಕ ಬಯಸಿದೆ. ೨೦೩೦ರ ವೇಳೆಗೆ ಚಂದ್ರನ ಮೇಲೆ ಮನುಷ್ಯರನ್ನು ಇಳಿಸುವ ತನ್ನದೇ ಆದ ಯೋಜನೆಗಳೊಂದಿಗೆ ಮುಂದುವರಿಯುತ್ತಿರುವ ಚೀನಾದಿಂದ ನಾಸಾ ಸ್ಪರ್ಧೆಯನ್ನು ಎದುರಿಸುತ್ತಿದೆ. ೨೦೩೨ರ ವೇಳೆಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ಪರಮಾಣು ಮತ್ತು ಸೌರಶಕ್ತಿಯಿಂದ ಚಾಲಿತ ಶಾಶ್ವತ ನೆಲೆಯನ್ನು ನಿರ್ಮಿಸಲು ೨೦ ಬಿಲಿಯನ್ ಡಾಲರ್ ಯೋಜನೆಯನ್ನು ನಾಸಾ ಘೋಷಿಸಿದೆ. ಜೆಫ್ ಬೆಜೋಸ್ ಅವರ ಬಾಹ್ಯಾಕಾಶ ಕಂಪನಿ ಬ್ಲೂ ಒರಿಜಿನ್ ಯಂತ್ರಗಳನ್ನು ಉತ್ಪಾದಿಸಲು ಆಯ್ಕೆಯಾದ ಹಲವು ಕಂಪನಿಗಳಲ್ಲಿ ಒಂದಾಗಿದೆ.

<>><><*><><<>

ಹಿಮಾಚಲ ಪ್ರದೇಶದ ಧರ್ಮಶಾಲ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್‌ನ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಗುಜರಾತ್ ಟೈಟನ್ಸ್ ವಿರುದ್ಧ ಗೆಲುವು ಸಾಧಿಸಿತು. ಈ ಮೂಲಕ ಫೈನಲ್‌ಗೆ ತಲುಪಿದ ಮೊದಲ ತಂಡವಾಗಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ತಂಡವು, ರಜತ್ ಪಾಟಿದಾರ್ ಅವರ ೯೩ ರನ್‌ಗಳ ನೆರವಿನಿಂದ ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ಕಳೆದುಕೊಂಡು ೨೫೪ ರನ್ ಗಳಿಸಿತು. ೨೫೫ ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ ತಂಡವು, ೧೯.೩ ಓವರ್‌ಗಳಲ್ಲಿ ೧೭೨ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ರಾಯಲ್ ಚಾಲೆಂಜರ್ಸ್ ಪರ ಜೇಕಬ್ ಡಫಿ ೩ ವಿಕೆಟ್ ಪಡೆದರು. ನ್ಯೂ ಚಂಡೀಗಢದ ಮೊಹಾಲಿಯಲ್ಲಿ ಇಂದು ನಡೆಯಲಿರುವ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**